OS No. 88/2022

DW-1

**(ಇಂದು ದಿಃ 01-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ. ಬಿ ಎಸ್ ವಕೀಲರಿಂದಃ-</u>**

ನನ್ನ ಮುತ್ಯನಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ, ನನ್ನ ಮತ್ಯಂದಿರು ಇಬ್ಬರು ಸಣ್ಣ ಬಸಪ್ಪ ಮತ್ತು ದೊಡ್ಡ ಬಸಪ್ಪ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನ್ನ ಮತ್ಯನ ಹೆಸರು ಬಸಪ್ಪ ತಂದೆ ಬಸಪ್ಪ ಮಾತ್ರ ಗೊತ್ತು ಎಂದು ಹೇಳುತ್ತಾರೆ. ನಾನು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳನ್ನು ನೋಡಿದ್ದೇನೆ . ಬಸಪ್ಪ ತಂದೆ ಬಸಪ್ಪ ನನ್ನ ಮತ್ಯ ಅಲ್ಲ , ಆತ ನನ್ನ ಮುತ್ಯನ ಮಾವ ಎಂದರೆ ಸರಿಯಲ್ಲ, ಸಣ್ಣ ಬಸಪ್ಪನ ತಂದೆಯ ಹೆಸರು ಗುಂಡಪ್ಪ ಎಂದರೆ ಸರಿಯಲ್ಲ, ದೊಡ ಬಸಪ್ಪ ತಂದೆ ಗುಂಡಪ್ಪ ನಾರಾಯಣಪೇಟದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ, ಸಣ್ಣ ಬಸಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸಾಕ್ಷಿ ನನಗೆ ಸಣ್ಣ ಬಸಪ್ಪ ಯಾರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಣ್ಣ ಬಸಪ್ಪನ ಮೊದಲನೇ ಹೆಂಡತಿ ಸುಗಮ್ಮ ಮತ್ತು ಎರಡನೇ ಹೆಂಡತಿ ಶಿವನಾಗಮ್ಮ ಎಂದರೆ ನನಗೆ ಗೊತ್ತಿಲ್ಲ, ನಾನು ಶಿವನಾಗಮ್ಮನ ಮೊಮ್ಮಗ ಎಂದರೆ ಸರಿ. ನನಗೆ ಮತ್ತು ಸುಗಮ್ಮರವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸುಗಮ್ಮ ನನ್ನ ಮುತ್ಯ ಬಸಪ್ಪ ತಂದೆ ಬಸಪ್ಪನ ಮೊದಲ ಹೆಂಡತಿ ಎಂದು ಹೇಳುತ್ತಾರೆ. ಶಿವನಾಗಮ್ಮನ ತವರೂರು ಯಾವುದು ನನಗೆ ಗೊತ್ತಿಲ್ಲ, ಶಿವನಾಗಮ್ಮ ಯಾದಗಿರಿ ತಾಲೂಕು ಫುಟಪಾತ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ, ಸುಗಮ್ಮನಿಗೆ 1 ರಿಂದ 4ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿಯಲ್ಲ, 1 ರಿಂದ 4ನೇ ಪ್ರತಿವಾದಿಯರು ಸುಗಮ್ಮನ ವಾರಸುದಾರರು ಎಂದರೆ ಸರಿಯಲ್ಲ ನಾನು ಸಣ್ಣಬಸಪ್ಪನ ಎರಡನೇ ಹೆಂಡತಿ ಶಿವನಾಗಮ್ಮನ ವಾರಸುದಾರರು ಎಂದರೆ ಸರಿಯಲ್ಲ, 5 ರಿಂದ 8ನೇ ಪ್ರತಿವಾದಿಯರು ಶಿವನಾಗಮ್ಮ ಗಂಡ ಸಣ್ಣಬಸಪ್ಪನ ವಾರಸುದಾರರು ಎಂದರೆ ಸರಿಯಲ್ಲ, ಬಸಪ್ಪ ತಂದೆ ಬಸಪ್ಪನಿಗೆ ಸುಗಮ್ಮ ಮತ್ತು ಈರಮ್ಮ ಇಬ್ಬರೇ ಮಕ್ಕಳಿದ್ದರು ಎಂದರೆ ಸರಿಯಲ್ಲ, ವಾದಿಯರು, ಈರಮ್ಮನ ಮಕ್ಕಳು, 1 ರಿಂದ 4ನೇ ಪ್ರತಿವಾದಿಯರು ಸುಗಮ್ಮನ ಮಕ್ಕಳು ಎಂದರೆ ಸರಿಯಲ್ಲ, ನಮಗೆ ಮತ್ತು ಬಸಪ್ಪ ತಂದೆ ಬಸಪ್ಪನ ಆಸ್ತಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಸುಗಮ್ಮನ ವಾರಸುದಾರರು ಬಂದು ಸಾಕ್ಷಿ ಹೇಳಿದರೆ ಸತ್ಯ ಗೊತ್ತಾಗುತ್ತದೆ ಎಂದು ನಾನು

ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿಯರು 1 ರಿಂದ 4ನೇ ಪ್ರತಿವಾದಿಯರಿಗೆ ಸಂಬಂಧ ಇರುವ ಕಾರಣ ವಾದಿಯರ ಸಹಿಗಳನ್ನು ನಿಡಿ-171ಕ್ಕೆ ಅವರ ಸಹಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡಾ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**